
# ‘ಶ್ರೀರಾಮಕೃಷ್ಣ ವಚನವೇದ’ ಭಾವಧಾರೆ - 14

ಸ್ವಾಮಿ ನಿತ್ಯಸ್ಥಾನಂದ

## ಜ್ಞಾನ ವಿಜ್ಞಾನ

ಶ್ರೀರಾಮಕೃಷ್ಣರ ಮಾತನ್ನು ಆಲಿಸೋಣ:

‘‘ಜ್ಞಾನಿ ‘ನೇತಿ, ನೇತಿ ಮಾರ್ಗ ಅನುಸರಿಸಿ ವಿಷಯಬುದ್ಧಿಯನ್ನು ಪೂರ್ಣವಾಗಿ ತ್ಯಾಗ ಮಾಡುತ್ತಾನೆ. ಆಗ ಮಾತ್ರವೇ ಅವನಿಗೆ ಬ್ರಹ್ಮನ ಸಾಕ್ಷಾತ್ಕಾರ. ಇದು ಮೆಟ್ಟಿಲ ಸಾಲಿನ ಹಂತಗಳನ್ನು ಒಂದೊಂದಾಗಿ ಹಿಂದೆ ಬಿಟ್ಟು ಛಾವಣಿ ಮುಟ್ಟುವ ಹಾಗೆ. ಆದರೆ ವಿಜ್ಞಾನಿ ವಿಶೇಷ ರೀತಿಯಾಗಿ ಬ್ರಹ್ಮದೊಡನೆ ಬೆರೆತು ಇನ್ನೂ ವಿಶೇಷವಾದ ಅನುಭವ ಪಡೆಯುತ್ತಾನೆ. ಆತ ಅನುಭವ ಪಡೆದುಕೊಳ್ಳುತ್ತಾನೆ — ಛಾವಣಿ ಯಾವ್ಯಾವ ವಸ್ತುಗಳಿಂದ ಅಂದರೆ, ಇಟ್ಟಿಗೆ, ಸುಣ್ಣ, ಇಟ್ಟಿಗೆ ಚೂರು ಇವುಗಳಿಂದ ನಿರ್ಮಿತವಾಗಿದೆಯೋ, ಅದೇ ವಸ್ತುಗಳಿಂದ ಮೆಟ್ಟಿಲ ಸಾಲೂ ನಿರ್ಮಿತವಾಗಿದೆ ಎಂಬುದಾಗಿ. ‘‘ನೇತಿ, ನೇತಿ’ ಮಾರ್ಗಗಳನ್ನು ಅನುಸರಿಸಿ ಯಾವ ವಸ್ತುಗಳನ್ನು ಬ್ರಹ್ಮ ಎಂಬುದಾಗಿ ಅರಿತುಕೊಂಡನೋ, ಅದೇ ವಸ್ತುವು ಜೀವ ಜಗತ್ತಾಗಿ ಇರುವುದು ಎಂದು ಆತನ ಅರಿವಿಗೆ ಬರುತ್ತದೆ. ಯಾರು ನಿರ್ಗುಣನೋ ಅವನೇ ಸಗುಣ ಎಂಬುದಾಗಿ ವಿಜ್ಞಾನಿಗೆ ಕಂಡುಬರುತ್ತದೆ.’’



ಈ ಮೇಲಿನ ವಿಷಯವನ್ನು ಸ್ವಾಮಿ ಅದ್ಭುತಾನಂದರು ಒಂದು ಸುಂದರ ಉದಾಹರಣೆಯ ಮೂಲಕ ವಿವರಿಸುತ್ತಾರೆ. ಮನೆಯ ಯಜಮಾನನು ಒಂದು ದಿನ ಕೋಸುಗಡ್ಡೆಯನ್ನು, ಕೊಂಡುಕೊಂಡು ಬಂದು ಮನೆಯ ಅಡಿಗೆಯವನಿಗೆ, ‘ಇದರಿಂದ ಒಂದು ಪಲ್ಯ ಮಾಡು’ ಎಂದು ಹೇಳುತ್ತಾನೆ. ಅಡಿಗೆಯವನಿಗೆ ಕೋಸುಗಡ್ಡೆ ಹೊಸತು. ಅವನು ಅದರ ಸಿಪ್ಪೆಯನ್ನು ಬಿಡಿಸುತ್ತ ಹೋದನು. ಎಷ್ಟೇ ಬಿಡಿಸುತ್ತ ಹೋದರೂ ಕೋಸುಗಡ್ಡೆಯು ಕಂಡು ಬರಲೇ ಇಲ್ಲ. ಬಹಳ ಬೇಸರದಿಂದ ಯಜಮಾನನಿಗೆ ವರದಿ ಒಪ್ಪಿಸಿದ. ಅವನಿಗೆ ನಡೆದ ಸಂಗತಿ ಅರ್ಥವಾಯಿತು. ಅವನು ಅಡಿಗೆಯವನಿಗೆ ಹೇಳಿದ: ‘‘ನೀನು ಯಾವುದನ್ನು ಕೋಸುಗಡ್ಡೆಯಲ್ಲ ಎಂದು ಬಿಸಾಕಿದೆಯೋ ಅದೇ ಕೋಸುಗಡ್ಡೆ. ಅದನ್ನು ತೆಗೆದುಕೊಂಡು ಬಾ. ಅದರಿಂದಲೇ ಒಳ್ಳೆಯ ಪಲ್ಯ ಮಾಡಿ ತೋರಿಸುತ್ತೇನೆ.’’ ಹೀಗೆಯೇ ‘ನೇತಿ, ನೇತಿ’ ಮಾರ್ಗದಿಂದ ಯಾವುದು ಪರಬ್ರಹ್ಮವಲ್ಲ ಎಂದು ತಿಳಿಯುತ್ತದೆಯೋ ಅಂತ್ಯದಲ್ಲಿ ಬ್ರಹ್ಮಾನುಭವದ ನಂತರ ಅದೇ ಪರಬ್ರಹ್ಮ ಎಂದು ಅನುಭವಕ್ಕೆ ಬರುತ್ತದೆ. ಪರ್ವತದ ತುತ್ತತುದಿಗೆ ಹೋದಮೇಲೆ ಅದನ್ನೂ ಮೀರಿ ಮೇಲೇರಲಾಗುವುದಿಲ್ಲ. ಅಲ್ಲಿ ನಿಂತುಕೊಂಡು ವ್ಯಕ್ತಿಯು ಸುತ್ತಲಿನ ವಿಹಂಗಮ ನೋಟವನ್ನು ನೋಡಿ ಆನಂದಿಸುತ್ತಾನೆ. ಆತ್ಯಂತಿಕ ಅನುಭವವನ್ನು ಪಡೆದ ಮೇಲೆ ಎಲ್ಲವೂ ಬ್ರಹ್ಮಮಯ, ಆನಂದಮಯ ಎಂಬುದಾಗಿ ಅನುಭವವಾಗುತ್ತದೆ. ಬ್ರಹ್ಮ ಜಗತ್ತಿನಿಂದ ಹೊರಗಡೆ ಇಲ್ಲ. ಬ್ರಹ್ಮವು ಜಗತ್ತಿನ ಅತೀತ ಎಂದರೆ ನಾಮರೂಪಗಳಿಗೆ ಅತೀತ ಎಂದರ್ಥ - ವಿವಿಧ ಬಗೆಯ ಮಡಕೆಗಳ ನಾಮರೂಪಗಳಿಗೆ ಅತೀತವಾಗಿ ನಾವು ಮಣ್ಣನ್ನು ಹೇಗೆ ಪಡೆಯಲಾಗುವುದಿಲ್ಲವೋ ಹಾಗೆಯೇ ಜಗತ್ತಿನಿಂದ ಬೇರೆಯಾಗಿ ಬ್ರಹ್ಮನನ್ನು ಪಡೆಯಲಾಗುವುದಿಲ್ಲ. ಇಲ್ಲಿ ಒಂದು ವ್ಯತ್ಯಾಸವೆಂದರೆ, ಮಣ್ಣು ಬಾಹ್ಯ ಶಕ್ತಿಯಿಂದ ಮಡಕೆಯಾಗಿ ಪರಿವರ್ತನೆಗೊಂಡಿದೆ. ಆದರೆ ಬ್ರಹ್ಮವು ಮಾಯಾಶಕ್ತಿಯ ಪ್ರಭಾವದಿಂದ ಜಗತ್ತಾಗಿ ತೋರುತ್ತದೆಯೇ ಹೊರತು ಪರಿವರ್ತನೆಗೊಂಡಿಲ್ಲ.

## ಸಗುಣ-ನಿರ್ಗುಣ ಸತ್ಯ

ಶ್ರೀರಾಮಕೃಷ್ಣರು ಹೇಳುತ್ತಾರೆ, ‘‘ಯಾರು ನಿರ್ಗುಣನೋ ಅವನೇ ಸಗುಣ ಎಂಬುದಾಗಿ ವಿಜ್ಞಾನಿಗೆ ಕಂಡುಬರುತ್ತದೆ’’ ಎಂದು. ನಿರ್ಗುಣ ಸತ್ಯವು ಇದ್ದರೂ ಕೂಡ ಅದು ನಮ್ಮ ಅರಿವಿಗೆ

ಬರದೇ ಇರುವುದರಿಂದ, ಅನುಭವಿಸಲಾಗದೆ ಇರುವುದರಿಂದ ಅಂತಹ ಸತ್ಯವು ಇದ್ದರೂ ಒಂದೆ, ಇಲ್ಲದಿದ್ದರೂ ಒಂದೆ, ಎಂದು ವಾದಿಸುವವರಿದ್ದಾರೆ. ಆದರೆ ಸಗುಣಸತ್ಯದಲ್ಲಿಯೂ ಗುಣಗಳ ಹಿಂದಿರುವ ಸತ್ಯವೇ ಪ್ರಧಾನವಾಗಿರುವುದರಿಂದ ಮತ್ತು ಆ ಸತ್ಯವು ನಿರ್ಗುಣವೆಂದು ಕಲ್ಪಿಸಬಹುದಾದ್ದರಿಂದ ನಿರ್ಗುಣ ಮತ್ತು ಸಗುಣ ಬೇರೆ ಬೇರೆ ಎಂದು ಪರಿಗಣಿಸಲಾಗುವುದಿಲ್ಲ. ಓರ್ವ ನಟನು ವಿವಿಧ ವೇಷಧಾರಿಯಾಗಿರುವಾಗಲೂ ನಟನಾಗಿಯೇ ಇರುತ್ತಾನೆ. ಸ್ವಾಮಿ ಅದ್ಭುತಾನಂದರು ಇದನ್ನು ಒಂದು ಸಂದೇಶವೆಂಬ ಸಿಹಿತಿಂಡಿಯ ಉದಾಹರಣೆಯ ಮೂಲಕ ವಿವರಿಸುತ್ತಾರೆ. ಸಂದೇಶದಲ್ಲಿ ನಿರಾಕಾರವಾದ ಸಿಹಿಯೇ ಪ್ರಧಾನವಾದರೂ ಅದನ್ನು ಸಂದೇಶವೆಂಬ ಸಾಕಾರರೂಪದಲ್ಲಿ ಅನುಭವಿಸುತ್ತೇವೆ.

ನಾವು ಸಗುಣವನ್ನು ಆರಾಧಿಸುತ್ತಿದ್ದರೂ ಅದರ ಹಿಂದಿರುವ ನಿರ್ಗುಣ ತತ್ತ್ವವನ್ನು ಮರೆಯಬಾರದು ಎಂದು ಸ್ವಾಮಿ ಯತೀಶ್ವರಾನಂದರು ಹೇಳುತ್ತಾರೆ. ನಾವು ವರ್ಣಚಿತ್ರವನ್ನು ನೋಡಿ ಆನಂದಪಡುತ್ತೇವೆ. ಆದರೆ ಅದರ ಹಿಂದೆ ಅದಕ್ಕೆ ಆಧಾರವಾದ ಹಿಂಬಟ್ಟೆ (ಕ್ಯಾನ್‌ವಾಸ್)ಯನ್ನು ಮರೆತುಬಿಡುತ್ತೇವೆ. ಶ್ರೀ ರಮಣಮಹರ್ಷಿಗಳು ಹೇಳುವಂತೆ, ನಾವು ಓದುವಾಗ ನಮ್ಮ ಗಮನವೆಲ್ಲ ಅಕ್ಷರಗಳ ಕಡೆಗೆ ಹೊರತು ಅವುಗಳ ಹಿಂದಿರುವ ಕಾಗದದ ಕಡೆಗಲ್ಲ.

ಶ್ರೀರಾಮಕೃಷ್ಣರು ಮುಂದುವರಿದು ಹೇಳುತ್ತಾರೆ: ''ವಿಜ್ಞಾನಿಗೆ ಮತ್ತೆ ಕಂಡು ಬರುತ್ತದೆ, ಬ್ರಹ್ಮನೇ ಸಾಕಾರನಾಗಿರುವುದು. ಯಾರು ಗುಣಾತೀತನೋ ಆತನೇ ಷಡ್ವೈಶ್ವರ್ಯಪೂರ್ಣ ಭಗವಂತನಾಗಿದ್ದಾನೆ. ಈ ಜೀವ ಜಗತ್ತು, ಮನಸ್ಸು ಬುದ್ಧಿ, ಭಕ್ತಿ, ವೈರಾಗ್ಯ, ಜ್ಞಾನ – ಇವೆಲ್ಲ ಆತನ ಐಶ್ವರ್ಯ. (ನಗುತ್ತ) ಯಾವ ಸಾಹುಕಾರನಿಗೆ ಮನೆ ಮಠ ಏನೂ ಇಲ್ಲವೋ, ಅಥವಾ ಇದ್ದರೂ ಮಾರಿ ಹಾಕಬೇಕಾಗಿ ಬಂದುಬಿಟ್ಟಿತೊ ಆ ಸಾಹುಕಾರ ಇನ್ನೆಂಥ ಸಾಹುಕಾರ?(ಎಲ್ಲರೂ ನಗುತ್ತಿದ್ದಾರೆ) ಭಗವಂತ ಷಡೈಶ್ವರ್ಯ ಪೂರ್ಣ. ಇದು ಹಾಗಿಲ್ಲದಿದ್ದರೆ ಅವನನ್ನು ಯಾರು ತಾನೆ ಲೆಕ್ಕಿಸುತ್ತಿದ್ದರು!''(ಎಲ್ಲರೂ ನಗುತ್ತಿದ್ದಾರೆ) ಭಗವಾನ್ ಎಂದರೆ 'ಭಗ' ಎಂಬ ಆರು ಐಶ್ವರ್ಯಗಳುಳ್ಳವನು:

**ಐಶ್ವರ್ಯಸ್ಯ ಸಮಗ್ರಸ್ಯ ಧರ್ಮಸ್ಯ ಯಶಸಃ ಶ್ರಿಯಃ ।**
**ಜ್ಞಾನವೈರಾಗ್ಯಯೋಶ್ಚೈವ ಷಣ್ಣಾಂ ಭಗ ಇತೀರಣಾ ॥**

*(ವ.ಪು. ೬.೫.೭೫)*

''ಈ ಆರು ಗುಣಗಳಿಗೆ ಭಗ ಎಂದು ಹೆಸರು: ಸಂಪೂರ್ಣ ಈಶ್ವರತ್ವ, ಧರ್ಮ, ಯಶಸ್ಸು, ಸಂಪತ್ತು (ಅಥವಾ ಸೌಂದರ್ಯ), ಜ್ಞಾನ ಮತ್ತು ವೈರಾಗ್ಯ.'' ದೇವರು ಕೇವಲ ನಿರ್ಗುಣವೇ ಆಗಿದ್ದರೆ, ಯಾರ ಗಮನಕ್ಕೂ ಅವನು ಬರುತ್ತಿರಲಿಲ್ಲ. ಅವನು ಭಗವಂತನೂ ಆಗಿರುವುದರಿಂದ ಎಲ್ಲರಿಂದ ಆರಾಧಿಸಲ್ಪಡುತ್ತಾನೆ.

## ಅಭಿವ್ಯಕ್ತಿ ವೈವಿಧ್ಯ

**ಶ್ರೀರಾಮಕೃಷ್ಣರು:** ''ಹಾಗೆ ನೋಡು, ಈ ಜಗತ್ತು ಎಷ್ಟು ವಿಚಿತ್ರ! ಎಷ್ಟು ಬಗೆಬಗೆಯ ವಸ್ತುಗಳು! – ಚಂದ್ರ, ಸೂರ್ಯ, ನಕ್ಷತ್ರ ಇತ್ಯಾದಿ. ಎಷ್ಟು ಬಗೆಯ ಜೀವಗಳು!– ದೊಡ್ಡದು, ಪುಟ್ಟದು ಒಳ್ಳೆಯದು, ಕೆಟ್ಟದ್ದು ದುರ್ಬಲವಾದದ್ದು; ಕೆಲವಕ್ಕೆ ಜಾಸ್ತಿ ಶಕ್ತಿ, ಕೆಲವಕ್ಕೆ ಕಡಿಮೆ ಶಕ್ತಿ.''

**ವಿದ್ಯಾಸಾಗರ:** ''ಏನು? ಆತ ಕೆಲವಕ್ಕೆ ಹೆಚ್ಚು ಶಕ್ತಿ ; ಕೆಲವಕ್ಕೆ ಕಡಿಮೆ ಶಕ್ತಿ ಕೊಟ್ಟಿದ್ದಾನೆಯೇ?''

**ಶ್ರೀರಾಮಕೃಷ್ಣರು:** ''ಭಗವಂತ ವಿಭುರೂಪದಲ್ಲಿ ಎಲ್ಲ ಭೂತಗಳಲ್ಲಿಯೂ ಇದ್ದಾನೆ, ಇರುವೆಯಲ್ಲಿ ಕೂಡ; ಆದರೆ ಮಾತ್ರ ಶಕ್ತಿ ವಿಶೇಷತೆಯಿದೆ. ಹಾಗಲ್ಲದಿದ್ದರೆ ಒಬ್ಬ ಹತ್ತು ಜನರನ್ನು ಬಡಿದೋಡಿಸಿಬಿಡುವುದಕ್ಕೂ, ಇನ್ನೊಬ್ಬ ಒಬ್ಬನನ್ನು ಕೂಡ ಎದುರಿಸಲಾಗದಿರುವುದಕ್ಕೂ ಎಲ್ಲಾಗುತ್ತಿತ್ತು? ಇಲ್ಲದಿದ್ದರೆ ನಿನ್ನನ್ನು ಏಕೆ ಎಲ್ಲ ಗೌರವಿಸುತ್ತಿದ್ದಾರೆ? ನಿನಗೇನು ಎರಡು ಕೊಂಬುಗಳು ಬೆಳದಿವೆಯೆ? (ನಗು) ನಿನ್ನಲ್ಲಿ ವಿದ್ಯೆ, ದಯೆ, ಬೇರೆಯವರಿಗಿಂತ ಅಧಿಕವಾಗಿ ಇದೆ. ಇದಕ್ಕಾಗಿ ಜನ ನಿನ್ನನ್ನು ಗೌರವಿಸುತ್ತಾರೆ, ನೋಡುವುದಕ್ಕೆ ಬರುತ್ತಾರೆ. ಏನು, ನಾನು ಹೇಳುವುದು ಸರಿ ತಾನೆ!?'' ವಿದ್ಯಾಸಾಗರ ಕಿರುನಗೆ ನಗುತ್ತಿದ್ದಾನೆ.

ಭಗವಂತನ ಶಕ್ತಿ ವಿವಿಧ ರೂಪಗಳಲ್ಲಿ ಅಭಿವ್ಯಕ್ತವಾಗುತ್ತದೆ ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದಾರೆ. ವಿದ್ಯುಚ್ಛಕ್ತಿಯು ಎಲ್ಲೆಡೆ ಇದ್ದರೂ ಕೆಲವು ಕಡೆ ಅದು ಬೆಳಕಾಗಿಯೂ, ಕೆಲವು ಕಡೆ ಶಾಖವಾಗಿಯೂ ಮತ್ತೆ ಕೆಲವು ಕಡೆ ಚಲನೆಯಾಗಿಯೂ ಅಭಿವ್ಯಕ್ತವಾಗುತ್ತದೆ. ಅಭಿವ್ಯಕ್ತಿಯು ಮಾಧ್ಯಮದ ಬದಲಾವಣೆಯನ್ನು ಅವಲಂಬಿಸಿರುತ್ತದೆ. ಶಿಷ್ಯನಲ್ಲಿಯೂ ದುಷ್ಟನಲ್ಲಿಯೂ ಒಂದೇ ಭಗವತ್‌ಶಕ್ತಿ ಕೆಲಸ ಮಾಡುತ್ತಿರುವುದು. ಅವರವರು ತಮ್ಮ ತಮ್ಮ ಸಾಧನೆ ಮತ್ತು ಸಂಸ್ಕಾರಗಳಿಗೆ ಅನುಗುಣವಾಗಿ ಅದನ್ನು ವ್ಯಕ್ತಪಡಿಸುತ್ತಾರೆ. ಒಂದೇ ಬೆಳಕು ವಿವಿಧ ಬಣ್ಣದ ಗಾಜಿನ ಮೂಲಕ ಹರಿದು ಬರುವಂತೆ. ಶ್ರೀರಾಮಕೃಷ್ಣರ ಮಾತು ಭಗವದ್ಗೀತೆಯ ಕೆಳಗಿನ ಶ್ಲೋಕವನ್ನು ನೆನಪಿಗೆ ತರುತ್ತದೆ: *(ಗೀತಾ, ೧೦.೪೧)*

**ಯದ್ಯದ್ವಿಭೂತಿಮತ್ಸತ್ತ್ವಂ ಶ್ರೀಮದೂರ್ಜಿತಮೇವ ವಾ ।**
**ತತ್ತದೇವಾವಗಚ್ಛ ತ್ವಂ ಮಮ ತೇಜೋಽಂಶಸಂಭವಮ್ ॥**

''ಯಾವ ಯಾವ ವಸ್ತು ವಿಭೂತಿಯುಳ್ಳದ್ದೊ, ಶ್ರೀಯುಕ್ತವೋ ಅಥವಾ ಉತ್ಸಾಹದಿಂದ ಕೂಡಿದೆಯೋ ಅದೆಲ್ಲವೂ ನನ್ನ ತೇಜಸ್ಸಿನ ಒಂದು ಅಂಶದಿಂದ ಉಂಟಾದುದೆಂದು ತಿಳಿದುಕೊ.''

ಮೇಲೆ ಶ್ರೀರಾಮಕೃಷ್ಣರು ಈ ಜಗತ್ತು ಎಷ್ಟು ವಿಚಿತ್ರ, ಎಷ್ಟು ವೈವಿಧ್ಯಮಯ ಎಂದು ತಮ್ಮ ಅಚ್ಚರಿಯನ್ನು ವ್ಯಕ್ತಪಡಿಸುತ್ತಾರೆ. ಇದು ಒಂದು ಪ್ರಸಂಗವನ್ನು ಮನಸ್ಸಿಗೆ ಬರುವಂತೆ ಮಾಡುತ್ತದೆ. ''ಒಬ್ಬ ವ್ಯಕ್ತಿಯು ದಟ್ಟ ಅಡವಿಯ ನಡುವೆ ಒಂದು ಬೃಹದಾಕಾರದ ಪಾರದರ್ಶಕ ಗೋಳವನ್ನು ನೋಡಿ, 'ಇದು ಹೇಗೆ

ಇಲ್ಲಿಗೆ ಬಂತು?' ಎಂದು ಅತ್ಯಾಶ್ಚರ್ಯವನ್ನು ವ್ಯಕ್ತಪಡಿಸುತ್ತಾನೆ. ಆದರೆ ತನ್ನ ಸುತ್ತಲೂ ಇರುವುದೆಲ್ಲವೂ ಅಷ್ಟೇ ಆಶ್ಚರ್ಯಕರವಾದುದು ಎಂಬುದನ್ನು ಅವನು ಮರೆಯುತ್ತಾನೆ.'' ಇದು ರಿಚರ್ಡ್ ಟಾಯಲರ್ ನೀಡಿರುವ ಉದಾಹರಣೆ. *(ನೋಡಿ: ''The experiance of God" by David Benky Hart, P. 90-91)*

ಶ್ರೀರಾಮಕೃಷ್ಣರು ಮಾತು ಮುಂದುವರಿಸುತ್ತಿದ್ದಾರೆ: ''ಕೇವಲ ಪಾಂಡಿತ್ಯ ಯಾವುದಕ್ಕೂ ಬಾರದು. ಭಗವಂತನ ಸಾಕ್ಷಾತ್ಕಾರ ಪಡೆದುಕೊಳ್ಳುವುದಕ್ಕಾಗಿಯೋ, ಆತನನ್ನು ಅರಿತುಕೊಳ್ಳುವುದಕ್ಕಾಗಿಯೋ ಪುಸ್ತಕಗಳ ವ್ಯಾಸಂಗ: ಒಬ್ಬ ಸಾಧುವಿನ ಹತ್ತಿರ ಒಂದು ಪುಸ್ತಕವಿತ್ತು. ಅದರಲ್ಲಿ ಏನು ಬರೆದಿದೆ ಎಂದು ಕೇಳಲಾಗಿ ಆತ ಅದನ್ನು ಬಿಚ್ಚಿ ತೋರಿಸಿದ. ಹಾಳೆ ಹಾಳೆಯಲ್ಲಿಯೂ 'ಓಂ ರಾಮಃ, ಓಂ ರಾಮಃ' ಎಂದು ಬರೆದಿತ್ತು – ಇನ್ನು ಏನೂ ಬರೆದಿರಲಿಲ್ಲ.'' ಇದೇ ರೀತಿ ಶಾಸ್ತ್ರಗ್ರಂಥದ ಪುಟಪುಟವೂ ಭಗವಂತನನ್ನು ನೆನಪಿಸಿಕೊಡುವಂತಾಗಬೇಕು. ಏಕೆಂದರೆ ಶಾಸ್ತ್ರಗ್ರಂಥಗಳ ನಿಜವಾದ ಉದ್ದೇಶವೇ ನಮ್ಮ ಮನಸ್ಸನ್ನು ಭಗವಂತನ ಕಡೆಗೆ ತಿರುಗಿಸುವುದು – ಶಾಸ್ತ್ರಗಳನ್ನು ನಾವು ಮೀರಿಹೋಗಬೇಕು ಎಂಬುದು – ದೋಣಿಯ ಮೂಲಕ ನದಿಯನ್ನು ದಾಟಿದ ಮೇಲೆ ದೋಣಿಯನ್ನು ಅಲ್ಲಿಯೇ ಬಿಟ್ಟು ಮುಂದುವರಿಯುವಂತೆ. ಎಲ್ಲವನ್ನು ಅಧ್ಯಯನ ಮಾಡಿ, ತಿಳಿದು, ತನಗೇನೂ ಗೊತ್ತಿಲ್ಲ ಎನ್ನುವ ಸ್ಥಿತಿಯನ್ನು ಮುಟ್ಟಬೇಕು. ಹೆಚ್ಚು ಹೆಚ್ಚು ನಮ್ಮ ಅಜ್ಞಾನದ ಅರಿವಾಗುವುದನ್ನೇ ಜ್ಞಾನವೆಂದು ಕರೆಯುವುದು. (Knowledge is nothing but progressive aware ness of our own ignorance).'ಪಂಚದಶಿ'ಯ ಒಂದು ಶ್ಲೋಕ ಹೇಳುತ್ತದೆ:

**ನ ಜಾನಾಮಿ ಕಿಮಪ್ಯೆತದಿತ್ಯಂತೇ ಶರಣಂ ತವ ।**

''ಇದೇನೆಂದು ನನಗೆ ಗೊತ್ತಾಗುತ್ತಿಲ್ಲಪ್ಪ ಎಂದು ಕೊನೆಯಲ್ಲಿ ನೀನು ಶರಣಾಗಲೇಬೇಕು.'' ವಿಚಾರ ಮನಸ್ಸು ಈ ರೀತಿ ಶರಣಾದಾಗ ಆತ್ಯಂತಿಕ ಸತ್ಯವು ತೋರಿಕೊಳ್ಳುತ್ತದೆ. 'ನನಗೇನೂ ತಿಳಿಯುತ್ತಿಲ್ಲ, ನೀನೇ ನನಗೆ ತಿಳಿಸಿಕೊಡು' ಎಂದು ದೇವರಿಗೆ ಶರಣಾಗಬೇಕು. ಈ ಶರಣಾಗತಿಯ ರೀತಿಯನ್ನು ಶ್ರೀ ಬಸವಣ್ಣನವರು ತುಂಬ ಮಾರ್ಮಿಕವಾಗಿ ಹೇಳಿದ್ದಾರೆ: ''ನೀನು ಒಂದು ಕಾಲಲ್ಲಿ ಒದ್ದರೆ, ಇನ್ನೊಂದು ಕಾಲು ಹಿಡಿದುಕೊಳ್ಳುತ್ತೇನೆ.'' ಎರಡೂ ಕಾಲುಗಳಿಂದ ಒದೆಯಲಾಗುವುದಿಲ್ಲವಷ್ಟೆ!

### ಎಲ್ಲರಿಗೂ ತ್ಯಾಗದ ಆದರ್ಶ ಮುಖ್ಯ

ಶ್ರೀರಾಮಕೃಷ್ಣರು: ''ಗೀತೆಯ ಸಂಚಿತಾರ್ಥವೇನು? ಹತ್ತು ಸಲ ಉಚ್ಚರಿಸಿದರೆ ಅದು ಏನಾಗಿ ಕೇಳಿ ಬರುತ್ತದೋ ಅದೇ ಅದು. 'ಗೀತಾ, ಗೀತಾ' ಎಂಬುದಾಗಿ ಹತ್ತು ಸಲ ಉಚ್ಚರಿಸಿದರೆ ಅದು 'ತ್ಯಾಗಿ ತ್ಯಾಗಿ' ಎಂಬುದಾಗಿ ಕೇಳಿಬರುತ್ತದೆ. ಎಂದರೆ ಗೀತೆಯ ಉಪದೇಶ: 'ಹೇ ಜೀವ, ಎಲ್ಲವನ್ನು ತ್ಯಾಗ ಮಾಡಿ ಭಗವಂತನ ಸಾಕ್ಷಾತ್ಕಾರಕ್ಕೆ ಪ್ರಯತ್ನಿಸು' ಎಂಬುದಾಗಿ. ಸಾಧುವೇ ಆಗಲಿ, ಸಂಸಾರಿಯೇ ಆಗಲಿ ಎಲ್ಲರೂ ಆಸಕ್ತಿಯನ್ನು ಮನಸ್ಸಿನಿಂದ ತೊಡೆದು ಹಾಕಬೇಕು.''

ತ್ಯಾಗವು ಕೇವಲ ಸಂನ್ಯಾಸಿಗಳ ಆದರ್ಶ ಎಂದು ಭಾವಿಸಬಾರದು. ಎಲ್ಲರಿಗೂ ತ್ಯಾಗದ ಆದರ್ಶ ಅತ್ಯಾವಶ್ಯಕ. ಕತ್ತಲೆ ಮತ್ತು ಬೆಳಕು ಹೇಗೆ ಒಟ್ಟಿಗೆ ಇರಲಾರವೋ ಹಾಗೆಯೇ ವಿಷಯಾಸಕ್ತಿ ಮತ್ತು ಭಗವದಾಸಕ್ತಿ ಎರಡು ಒಟ್ಟಿಗೆ ಇರಲಾರವು. ವ್ಯಾವಹಾರಿಕವಾಗಿಯೂ ನಾವು ಕುಟುಂಬದಲ್ಲಿ, ಸಮಾಜದಲ್ಲಿ ನೆಮ್ಮದಿಯ ಜೀವನ ನಡೆಸಬೇಕಾದರೆ ತ್ಯಾಗ ಮನೋಭಾವ ಇರಲೇಬೇಕಾಗುತ್ತದೆ. ''ಸಾಮಾಜಿಕ ಸಂಸ್ಥೆಗಳು, ಕುಟುಂಬ ವ್ಯವಸ್ಥೆ, ವಿವಾಹ ಪದ್ಧತಿ, ಸತ್ಕರ್ಮಗಳು — ಇವುಗಳೆಲ್ಲವೂ ತ್ಯಾಗದ ವಿವಿಧ ರೂಪಗಳು'' ಎಂದು ಸ್ವಾಮಿ ವಿವೇಕಾನಂದರು ಒಂದು ಉದಾಹರಣೆಯ ಮೂಲಕ ಇದನ್ನು ವಿವರಿಸುತ್ತಾರೆ. ಒಂದು ಥಿಯೇಟರ್‌ನಲ್ಲಿ ನಾಟಕ ನಡೆಯುತ್ತಿರುವಾಗ ಬೆಂಕಿ ಬೀಳುತ್ತದೆ ಎಂದಿಟ್ಟುಕೊಳ್ಳಿ. ಆಗ ಎಲ್ಲರೂ ಕಿರುಬಾಗಿಲಿನ ಮೂಲಕ ಹೊರನುಗ್ಗಲು ಪ್ರಯತ್ನಿಸುತ್ತಾರೆ. ಕೆಲವರು ಕಾಲ್ತುಳಿತಕ್ಕೆ ಸಾಯುತ್ತಾರೆ, ಮತ್ತನೇಕರು ಬೆಂಕಿಗೆ ಆಹುತಿಯಾಗುತ್ತಾರೆ. ಇದು ಸ್ವಾರ್ಥದ ಪರಿಣಾಮ. ತಮ್ಮನ್ನು ಹಿಂದೆ ಬಿಟ್ಟು ಇತರರಿಗೆ ಅವಕಾಶ ಮಾಡಿಕೊಡುವ ಪ್ರವೃತ್ತಿ ಕೆಲವರಿಗಾದರೂ ಇದ್ದಿದ್ದರೆ ಎಲ್ಲರೂ ಬೆಂಕಿಯ ಅನಾಹುತದಿಂದ ಪಾರಾಗಬಹುದಿತ್ತು. ಇದೇ ತ್ಯಾಗ ಮನೋಭಾವ.

### 'ನಾನು'ವಿನ ನಾನಾಮುಖ

ಶ್ರೀರಾಮಕೃಷ್ಣರು ಮುಂದುವರಿಸುತ್ತ ಹೇಳುತ್ತಾರೆ: ''ವಿಜ್ಞಾನಿ ಏಕೆ ಭಕ್ತಿಯನ್ನು ಆಶ್ರಯಿಸಿಕೊಂಡಿರುತ್ತಾನೆ ಗೊತ್ತೆ? ಈ 'ಅಹಂ' ಎಂಬುದು ಹೋಗದೆ ಇರುವುದರಿಂದ. ಸಮಾಧಿಯ ಅವಸ್ಥೆಯಲ್ಲಿ ಅದು ಹೊರಟುಹೋಗುವುದೇನೋ ನಿಜ. ಆದರೆ ಅದು ಮತ್ತೆ ಬಂದುಬಿಡುತ್ತದೆ. ಸಾಧಾರಣ ಜೀವರ 'ಅಹಂ' ಎಂದಿಗೂ ಹೋಗುವುದೇ ಇಲ್ಲ. ಅಶ್ವತ್ಥ ವೃಕ್ಷವನ್ನು ಇಂದು ಕತ್ತರಿಸು, ಮಾರನೇ ದಿನವೇ ಅದು ಚಿಗುರುತ್ತದೆ.'' (ಎಲ್ಲರೂ ನಗುತ್ತಿದ್ದಾರೆ).

ಅಶ್ವತ್ಥಕ್ಕೆ ಸ್ವಲ್ಪ ಆಶ್ರಯ ಸಿಕ್ಕಿದರೆ ಸಾಕು ಬೆಳೆದುಬಿಡುತ್ತದೆ. ಅವಕ್ಕೆ ಪ್ರತ್ಯೇಕ ನೀರುಗೊಬ್ಬರ ಹಾಕಬೇಕಾಗಿಲ್ಲ. ಹೇಗೋ ಒಂದು ಬೀಜ ಬಿದ್ದುಬಿಟ್ಟರೆ ಅಲ್ಲಿಯೇ ಹುಟ್ಟಿಕೊಂಡುಬಿಡುತ್ತದೆ. ಹಾಗೆಯೇ 'ಅಹಂ' ಒಂದು ಸಣ್ಣ ವಿಷಯವನ್ನೇ ಹಿಡಿದುಕೊಂಡು, ಹಣ, ಸ್ವಲ್ಪ ಅಧಿಕಾರ, ಅಲ್ಪಜ್ಞಾನ, ಕೀರ್ತಿ ಅಥವಾ ಶಕ್ತಿ–ಸಾಮರ್ಥ್ಯ ಇಂತಹದಾವುದನ್ನಾದರೂ ಆಶ್ರಯಿಸಿಕೊಂಡು ದೊಡ್ಡದಾಗಿ ಬೆಳೆದುಬಿಡುತ್ತದೆ. ಸಾಮಾನ್ಯವಾಗಿ ಪಾಳುಬಿದ್ದ ಮನೆ, ಗುಡಿ ಮುಂತಾದವುಗಳಲ್ಲಿ ಅಶ್ವತ್ಥ ಗಿಡಗಳು ಹುಟ್ಟಿರುವುದನ್ನು ನಾವು ನೋಡುತ್ತೇವೆ. ನಮ್ಮ ವ್ಯಕ್ತಿತ್ವವನ್ನು ಉನ್ನತ ಆದರ್ಶಗಳಿಂದ ಗಟ್ಟಿಗೊಳಿಸದಿದ್ದರೆ, ಅಶಿಸ್ತಿನ ಜೀವನದಿಂದ ಅದನ್ನು ಹಾಳುಗೆಡುಹಿದರೆ ಅಲ್ಲಿ ಬರಿಯ ಅಹಂಕಾರವೇ ಬೆಳೆದುಕೊಂಡಿರುತ್ತದೆ. ಅಶ್ವತ್ಥದ ಎಲೆಗಳು ತುಂಬ ಚಂಚಲ, ಸ್ವಲ್ಪ ಗಾಳಿ

ಬೀಸಿದರೂ ಸಾಕು, ಪಟ ಪಟ ಶಬ್ದ ಮಾಡುತ್ತವೆ. ಹಾಗೆಯೇ ಅಹಂಕಾರ ತುಂಬಿಕೊಂಡಿದ್ದರೆ ಮನಸ್ಸು ಅತ್ಯಂತ ಚಂಚಲವಾಗುತ್ತದೆ. ಹೀಗೆ ಶ್ರೀರಾಮಕೃಷ್ಣರು ಅಹಂ ಅನ್ನು ಅಶ್ವತ್ಥಕ್ಕೆ ಹೋಲಿಸಿರುವುದು ತುಂಬಾ ಸೂಕ್ತವಾಗಿದೆ.

ಈ 'ಅಹಂ' ಕೇವಲ ಹಣ ಮುಂತಾದುವುಗಳನ್ನಷ್ಟೇ ಆಶ್ರಯಿಸಿ ಕೊಂಡಿರುವುದಿಲ್ಲ. ನಮ್ಮಲ್ಲಿರುವ ದುಷ್ಟ ಪ್ರವೃತ್ತಿಗಳನ್ನೂ, ದೌರ್ಬಲ್ಯಗಳನ್ನೂ ಆಶ್ರಯಿಸಿಕೊಂಡಿರಬಹುದು. ಸ್ವಾಮಿ ಯತೀಶ್ವರಾನಂದರ ಜೀವನದಲ್ಲಿ ಒಂದು ಸ್ವಾರಸ್ಯಕರ ಘಟನೆ ಬರುತ್ತದೆ. ಒಬ್ಬ ಭಕ್ತನು ಅವರಿಗೊಂದು ಪತ್ರವನ್ನು ಇಂಗ್ಲಿಷಿನಲ್ಲಿ ಬರೆದಿದ್ದನು. ಅದನ್ನು ಅವರ ಸೇವಕರು ಅವರಿಗೆ ಓದಿ ಹೇಳುತ್ತಿದ್ದರು. ಅದರಲ್ಲಿ 'ನಾನು ಧ್ಯಾನ ಮಾಡಲಾರೆ, ನನ್ನ ಮನಸ್ಸು ತುಂಬ ಚಂಚಲ, ನಾನು ಕೆಟ್ಟ ಸಂಸ್ಕಾರಗಳಿಂದ ಹುಟ್ಟಿರಬೇಕು' ... ಇತ್ಯಾದಿ ಆ ಪತ್ರದಲ್ಲಿ ಅವನು ಅನೇಕ ಬಾರಿ 'ನಾನು' ಶಬ್ದವನ್ನು ಉಪಯೋಗಿಸಿದ್ದನು. ಇದನ್ನು ಕೇಳಿ ಸ್ವಾಮೀಜಿಯವರು ಮುಗುಳ್ನಗುತ್ತ, ''ಅದರಲ್ಲಿ ಎಷ್ಟು 'ನಾನು'ಗಳಿವೆ ಎಂದು ಎಣಿಸು.'' ಎಂದು ಹೇಳಿದರು. ಸೇವಕರು ಎಣಿಸಿ ೪೯ 'ನಾನು' ಗಳಿವೆ ಎಂದು ತಿಳಿಸಿದರು. ಈಗ ಸ್ವಾಮೀಜಿಯವರು ಹೇಳಿದರು: ''ಅವನಿಗೆ ಬರೆ, ನಿನ್ನಲ್ಲಿ ಇಷ್ಟೊಂದು 'ನಾನು' ಇದ್ದರೆ ನೀನು ಹೇಗೆ, ತಾನೆ ಧ್ಯಾನ ಮಾಡಬಲ್ಲೆ?''

''ಸೇವ್ಯ–ಸೇವಕ ಭಾವವೇ ಒಳ್ಳೆಯದು. 'ಅಹಂ' ಎಂಬುದು ಪೂರ್ಣವಾಗಿ ಹೋಗದೆ ಇರುವುದರಿಂದ ಆ ನೀಚಮುಂಡೇದು 'ದಾಸ ಅಹಂ' ಆಗಿ ಉಳಿದುಕೊಂಡಿರಲಿ'' ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ, ನಮ್ಮಲ್ಲಿ ಹಲವು ನಾನುಗಳಿರುತ್ತವೆ. ಬೇರೆ ಬೇರೆ ಸಂದರ್ಭಗಳಿಗೆ ತಕ್ಕಂತೆ, ಸ್ಥಾನಮಾನಗಳಿಗೆ ತಕ್ಕಂತೆ 'ನಾನು' ಬದಲಾಗುತ್ತವೆ. ದೇವಾಲಯಕ್ಕೆ ಹೋದಾಗ ಒಬ್ಬ ವ್ಯಕ್ತಿ ಮಹಾಭಕ್ತನಾಗುತ್ತಾನೆ, ತುಂಬ ದಾನಧರ್ಮ ಮಾಡುತ್ತಾನೆ. ಅದೇ ವ್ಯಕ್ತಿ ವ್ಯಾಪಾರ ಮಾಡುತ್ತಿರುವಾಗ ಧನಪಿಶಾಚಿಯಾಗುತ್ತಾನೆ, ಯಾವುದೇ ಮೋಸವಂಚನೆಗೂ ಹೇಸುವುದಿಲ್ಲ. ಅದೇ ವ್ಯಕ್ತಿ ಮನೆಗೆ ಬಂದಾಗ ಬೇರೆಯೇ ವ್ಯಕ್ತಿಯಾಗುತ್ತಾನೆ. ಹೀಗೆ ಅವನಲ್ಲಿ ಹಲವಾರು ವ್ಯಕ್ತಿತ್ವಗಳಿರುತ್ತವೆ. ಇದು ಏಕ ಪಾತ್ರಾಭಿನಯವಿದ್ದಂತೆ! ರಾವಣನಿಗೆ ಹತ್ತು ತಲೆಗಳಿದ್ದವು ಎಂದು ಚಿತ್ರಿಸಿರುವುದಕ್ಕೆ ಅವನಲ್ಲಿ ಹಲವಾರು ವ್ಯಕ್ತಿತ್ವಗಳಿದ್ದುದೇ ಕಾರಣವಾಗಿರಬಹುದು. ಈ ಎಲ್ಲ 'ಅಹಂ'ಗಳು ಒಂದು ಮುಖ್ಯ 'ಅಹಂ' ನ ವಶದಲ್ಲಿರಬೇಕು ಎಂಬುದು ಶ್ರೀರಾಮಕೃಷ್ಣರ ಅಭಿಪ್ರಾಯ. 'ನಾನು ಭಗವಂತನ ದಾಸ' ಅಥವಾ 'ನಾನು ಭಗವಂತನ ಮಗು' ಎಂಬಿತ್ಯಾದಿಯಾದ 'ಅಹಂ', ಒಟ್ಟಿನಲ್ಲಿ 'ನಾನು ಆಧ್ಯಾತ್ಮಿಕ ವ್ಯಕ್ತಿ' ಎಂಬ 'ಅಹಂ' ಬೇರೆಲ್ಲ 'ಅಹಂ'ಗಳನ್ನು ಆಳುವಂತಾಗಬೇಕು. ನಾನು ದೇವಾಲಯದಲ್ಲಿರಲಿ, ವ್ಯಾಪಾರ ಮಾಡುತ್ತಿರಲಿ, ಮನೆಯಲ್ಲೇ ಇರಲಿ, ಏನೇ ಮಾಡುತ್ತಿರಲಿ 'ನಾನು ಆಧ್ಯಾತ್ಮಿಕ ವ್ಯಕ್ತಿ' ಎಂಬುದನ್ನು ಮರೆಯಬಾರದು. ಈ ಆಧ್ಯಾತ್ಮಿಕ 'ನಾನು' ನನ್ನ ಎಲ್ಲ ನಡೆನುಡಿಗಳನ್ನೂ ನಿಯಂತ್ರಿಸುವಂತಿರಬೇಕು. ಸಾಮಾನ್ಯ ವ್ಯಕ್ತಿತ್ವವನ್ನು ಪಾಳೆಯಗಾರರ ರಾಜ್ಯಕ್ಕೆ ಹೋಲಿಸಬಹುದು. ಅಲ್ಲಿ ತುಂಬ ಅರಾಜಕತೆಯೆನಿಸುತ್ತದೆ. ಒಬ್ಬ ಚಕ್ರಾಧಿಪತಿಯು ಬಂದು ಅವರೆಲ್ಲರನ್ನೂ ತನ್ನ ಅಧೀನದಲ್ಲಿ ಇರಿಸಿಕೊಂಡು ಆಳುವಂತಾಗಬೇಕು.

## 'ನಾನು'ವಿನ ಮೂಲ

ಈ 'ನಾನು' ಎಂಬುದು ಎಲ್ಲಿದೆ? ಮಿದುಳಿನಲ್ಲಿ 'ನಾನು' ಎಂಬುದಕ್ಕೆ ಸಂಬಂಧಪಟ್ಟ ಅಥವಾ ನಿರ್ದಿಷ್ಟ ಕೇಂದ್ರವಿಲ್ಲವಂತೆ. ದೇಹದ ಆಯಾಯ ಕ್ರಿಯೆಗಳಿಗೆ ಸಂಬಂಧಪಟ್ಟ ನರಸಂಪರ್ಕಗಳು ಮಿದುಳಿನಲ್ಲಿ ಸೃಷ್ಟಿಯಾದಾಗ ಎಲ್ಲಿಂದಲೋ 'ನಾನು' ಎಂಬುದು ಬಂದು ಅಲ್ಲಿ ತೂರಿಕೊಳ್ಳುತ್ತದೆ. ಆಗ 'ನಾನು' ಆ ಕ್ರಿಯೆಯನ್ನು ಮಾಡುತ್ತಿದ್ದೇನೆ ಎಂದೆನಿಸುತ್ತದೆ. 'ನಾನು ಎಂಬುದರ ನೆಲೆಯನ್ನು ಪತ್ತೆಹಚ್ಚಲಾಗುವುದಿಲ್ಲ. ಇದು ಏನು ಎಂಬುದನ್ನು ವಿಶ್ಲೇಷಿಸುತ್ತ ಹೋದರೆ ತಾನೇ ಕಣ್ಮರೆಯಾಗುತ್ತದೆ. ಒಬ್ಬ ವ್ಯಕ್ತಿಯನ್ನು 'ನೀನು ಯಾರು?'' ಎಂದು ಕೇಳಿದರೆ ಅವನು ತನ್ನ ಹೆಸರನ್ನು ಹೇಳಬಹುದು. ಆದರೆ ಅದು ತಾತ್ಕಾಲಿಕವಾಗಿ ಅವನನ್ನು ಗುರುತಿಸಲು ಅವನಿಗೆ ನೀಡಿರುವ ಒಂದು ಶಬ್ದ. ಅಷ್ಟೇ ಅಲ್ಲದೆ, ಅದೇ ಹೆಸರಿನ ವ್ಯಕ್ತಿ ಅನೇಕರಿರಬಹುದು. ಆತ ತಾನು ಅಧ್ಯಕ್ಷ ಅಥವಾ ಕಾರ್ಯದರ್ಶಿ ಅಂತಲೋ ಆತವಾ ತನ್ನ ಕೆಲಸಕ್ಕೆ ಸಂಬಂಧ ಪಟ್ಟಂತೆ ವ್ಯಾಪಾರಿ ಅಂತಲೋ, ರೈತ ಅಂತಲೋ ಹೇಳಬಹುದು. ಅದು ಕೂಡ ಅವನ ಸ್ಥಾನ ಅಥವಾ ಕೆಲಸವನ್ನು ನಿರ್ದೇಶಿಸುತ್ತದೆಯೇ ಹೊರತು ತಾನು ಯಾರು ಎಂಬುದನ್ನು ಸೂಚಿಸುವುದಿಲ್ಲ. ಅವನು ಏನೇ ಉತ್ತರ ಕೊಟ್ಟರೂ ಅದು ನಿರ್ದಿಷ್ಟವಾಗಿ ಅವನು ಯಾರು ಎಂಬುದನ್ನು ಸೂಚಿಸುವುದಿಲ್ಲ. ಅವನು ತಾನು ಆತ್ಮಾ ಅಥವಾ ಭಗವಂತ ಎಂದು ಹೇಳಿದರೆ ಅವನಿಗೆ ತಲೆ ಕೆಟ್ಟಿದೆ ಎಂದು ಪರಿಗಣಿಸಬಹುದು. ಆದ್ದರಿಂದ 'ನಾನು' ಎಂದು ಬೊಟ್ಟುಮಾಡಿ ತೋರಿಸುವುದಕ್ಕೆ ನಮ್ಮಲ್ಲಿ ಯಾವ ಅಂಶವೂ ಇಲ್ಲ. ಈ ಇಲ್ಲದಿರುವ 'ನಾನು'ವೇ ಇಡೀ ಪ್ರಪಂಚವನ್ನು ನಡೆಸುತ್ತಿರುವುದು. ಇದನ್ನೇ 'ಮಾಯೆ' ಎಂದು ಕರೆಯುವುದು.

ಶ್ರೀರಾಮಕೃಷ್ಣರು: ''ನಾನು, 'ನನ್ನದು'– ಇವೆರಡೇ ಅಜ್ಞಾನಕ್ಕೆ ಮೂಲ. 'ನನ್ನ ಮನೆ,' ನನ್ನ ಹಣ', 'ನನ್ನ ಪಾಂಡಿತ್ಯ', 'ನನ್ನ ಐಶ್ವರ್ಯ' ಎಂಬ ಈ ಭಾವ ಇದೆಯಲ್ಲ, ಇದು ಅಜ್ಞಾನದಿಂದ ಜನಿಸುತ್ತದೆ. ಇದಕ್ಕೆ ಬದಲು, 'ಹೇ ಭಗವಂತ, 'ನೀನು ಕರ್ತ, ಇವೆಲ್ಲವೂ ನಿನಗೆ ಸೇರಿದವೇ'– ಈ ಭಾವ ಜ್ಞಾನದಿಂದ ಜನಿಸುತ್ತದೆ.''

ಇಬ್ಬರು ಹುಡುಗರು ಕಲ್ಲು ಹೊಡೆದು ಮರದಿಂದ ಹಣ್ಣು ಬೀಳಿಸುತ್ತಾರೆ. ಈಗ ಆ ಹಣ್ಣು ಯಾರಿಗೆ ಸೇರಿದ್ದು–ಎಂದು ಚರ್ಚೆ ನಡೆಯುತ್ತದೆ. ಒಂದು ಚಿಕ್ಕ ಹುಡುಗಿ ಹೇಳುತ್ತದೆ, ''ಅದು ಮರಕ್ಕೆ ಸೇರಿದ್ದು'' ಎಂದು. ಹಾಗೆಯೇ ಎಲ್ಲವೂ ಭಗವಂತನಿಗೇ ಸೇರಿದುದು, ಹಾಗೂ ಎಲ್ಲ ಕ್ರಿಯೆಗಳೂ ಭಗವತ್ ಶಕ್ತಿಯಿಂದಲೇ ನಡೆಯುವುದು.

*(ಮುಂದುವರಿಯುವುದು)*